Spl. C. No. 142/2022
PW.01

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಸ್ಪೇಷಲ್ ಕೇಸ್ ನಂ. 142/2022**

**ದೋ.ಸಾ. : 01 ಫಾ.ಸಾ. : 01**

**ದಿನಾಂಕಃ 03-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

4. ಆ ದಿನ ಆಸ್ಪತ್ರೆಯ ವೈದ್ಯರು ಪೋಲಿಸರಿಗೆ ಮಾಹಿತಿ ನೀಡಿದ್ದು, ಅದರಂತೆ ಪೋಲಿಸರು ಆಸ್ಪತ್ರೆಗೆ ಬಂದಿದ್ದರು. ಅಲ್ಲಿ ನಾನು, ನನ್ನ ಅಣ್ಣನಾದ ಚಾಸಾ-7 ರವರನ್ನು ವಿಚಾರಿಸಿದಾಗ, ಆತ "2 ನೇ ಆರೋಪಿತನು ನಿನ್ನ ತಾಯಿಯನ್ನು ಅಂಬ್ಯುಲೆನ್ಸ್ ನಲ್ಲಿ ಗಾಂಧಿ ನಗರದ ನಿನ್ನ ತಾಯಿಯ ಮನೆಯ ಬಳಿ ಕರೆದುಕೊಂಡು ಬಂದಿದ್ದ, ಆಗ ನಾನು ಏನಾಗಿದೆ ಎಂದು ವಿಚಾರಿಸಿದಾಗ, ಆತ ಹೃದಯಾಘಾತವಾಗಿದೆ ಎಂದು ತಿಳಿಸಿದ, ಆದರೆ ನಾನು ಮೃತ ದೇಹವನ್ನು ನೋಡಿದಾಗ, ಕುತ್ತಿಗೆಯ ಬಳಿ ಬಿಗಿದಿದ್ದ ಗುರುತು ಇತ್ತು ಹಾಗೂ ಕಾಲಿನ ಹಿಮ್ಮಡಿಯ ಹತ್ತಿರ ತೆರೆಚಿದ ಗಾಯವಾಗಿ, ರಕ್ತ ಬಂದಿತ್ತು, ಆಗ ನನಗೆ ಸಂಶಯ ಬಂದು, ನಿನ್ನ ತಾಯಿಯನ್ನು ಅದೇ ಅಂಬ್ಯುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ" ಎಂದು ಹೇಳಿದನು. ಆಸ್ಪತ್ರೆಯ ಶವಗಾರದಲ್ಲಿ ನಾನು ನನ್ನ ತಾಯಿಯ ಕುತ್ತಿಗೆ ಬಳಿ ಇದ್ದ ಬಿಗಿದ ಗುರುತು ಹಾಗೂ ಹಿಮ್ಮಡಿಯ ಬಳಿ ರಕ್ತ ಗಾಯವಾದದ್ದನ್ನು ನೋಡಿ, ನನ್ನ ತಾಯಿಯ ಕೊಲೆಯಾಗಿರಬಹುದು ಎಂದು ಸಂಶಯ ಬಂದಿದ್ದರಿಂದ, ನಾನು ಚಾಸಾ-8 ರವರಿಂದ ದೂರನ್ನು ಬರೆಯಿಸಿ, ಸದರಿ ದೂರಿಗೆ ಸಹಿ ಮಾಡಿ, ಆಸ್ಪತ್ರೆಗೆ ಬಂದಿದ್ದ ಪೋಲಿಸರ ಬಳಿ ದೂರನ್ನು ನೀಡಿರುತ್ತೇನೆ. ಸಾಕ್ಷಿ ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

5. ಅದೇ ದಿನ ಅಂದರೆ ದಿಃ 26-08-2022 ರಂದು ಪೋಲಿಸರು ಆಸ್ಪತ್ರೆಯ ಶವಗಾರದಲ್ಲಿ ಶವ ಪಂಚನಾಮೆಯನ್ನು ಮಾಡಿದರು. ಶವ ಪಂಚನಾಮೆಯ ಕಾಲಕ್ಕೆ ಚಾಸಾ-2 ಮತ್ತು 3 ರವರು ಸ್ಥಳದಲ್ಲಿ ಹಾಜರಿದ್ದರು. ಶವ ಪಂಚನಾಮೆಯ ಕಾಲಕ್ಕೆ ಶವವನ್ನು ಪರಿಶೀಲಿಸಿದಾಗ, ಶವದ ಮೇಲೆ ಮಿಕ್ಸ್ ಕಲರ್ ಸೀರೆ, ಕೆಸರಿ ಬಣ್ಣದ ಬ್ಲೌಸ್ ಮತ್ತು ಕಂದು ಬಣ್ಣದ ಲಂಗವನ್ನು ತೊಟ್ಟಿದ್ದರು, ಎರಡೂ ಕಾಲುಗಳಲ್ಲಿ ಬಿಳಿ ಬಣ್ಣದ ಚೈನು, ಎರಡೂ ಕೈಗಳಲ್ಲಿ

ಗಾಜಿನ ಬಳೆ ಮತ್ತು ಕಡಗ ಇದ್ದವು, ಬಲಕಿವಿಯಲ್ಲಿ ಒಂದು ಒಲೆ ಇತ್ತು, ಕುತ್ತಿಗೆಯಲ್ಲಿ ಬಿಗಿದಿದ್ದ ಗುರುತು ಇತ್ತು, ಕಾಲಿನ ಹಿಮ್ಮಡಿಗಳಿಗೆ ತೆರಚಿದ ರಕ್ತ ಗಾಯವಾಗಿತ್ತು. ಪೋಲಿಸರು ಶವ ಪಂಚನಾಮೆಯನ್ನು ಮದ್ಯಾಹ್ನ 03-30 ರಿಂದ 05-00 ಗಂಟೆಯ ವರೆಗೆ ಮಾಡಿರುತ್ತಾರೆ ಹಾಗೂ ಪೋಟೋ ತೆಗೆದಿರುತ್ತಾರೆ. ಶವ ಪಂಚನಾಮೆಯ ಕಾಲಕ್ಕೆ ತೆಗೆದ ಒಂದು ಪೋಟೊವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ರ ಪೋಟೋದಲ್ಲಿ ತಾನು ಇರುವುದಾಗಿ ನುಡಿಯುತ್ತಾರೆ ಹಾಗೂ ತನ್ನ ತಾಯಿಯ ಶವವನ್ನು ನೋಡಿ ಗುರುತಿಸಿರುತ್ತಾರೆ. ಆ ನಂತರ ಆಸ್ಪತ್ರೆಯ ವೈದ್ಯರು ಮರಣೋತ್ತರ ಪರೀಕ್ಷೆಯನ್ನು ಮಾಡಿರುತ್ತಾರೆ. ಮರಣೋತ್ತರ ಪರೀಕ್ಷೆಯ ನಂತರ ಪೋಲಿಸರು ಮೃತ ದೇಹವನ್ನು ನಮಗೆ ಒಪ್ಪಿಸಿರುತ್ತಾರೆ.

6. ಆ ನಂತರ ಮರು ದಿನ ಅಂದರೆ ದಿಃ 27-08-2022 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ, ಅಲ್ಲಿ ಆರೋಪಿತರನ್ನು ತೋರಿಸಿ, ಇವರೇ ನಿನ್ನ ತಾಯಿಯನ್ನು ಕೊಲೆ ಮಾಡಿರುತ್ತಾರೆ ಎಂದು ತೋರಿಸಿದ್ದು, ಅಲ್ಲಿ ನಾನು ಆರೋಪಿತರನ್ನು ನೋಡಿರುತ್ತೇನೆ. ಅಲ್ಲಿ ನಾನು ಪೋಲಿಸರನ್ನು ಯಾವ ಕಾರಣಕ್ಕಾಗಿ ಕೊಲೆ ಮಾಡಿರುತ್ತಾರೆ ಎಂದು ವಿಚಾರಿಸಿದಾಗ, "ದಿಃ 25-08-2022 ರಂದು ರಾತ್ರಿ 1 ನೇ ಆರೋಪಿಯು ಮೃತೆ ಸುಶೀಲಾಳೊಂದಿಗೆ ದೈಹಿಕ ಸಂಪರ್ಕ ಹೊಂದಲು ಪ್ರಯತ್ನಿಸಿದ್ದು, ಆಗ ಸುಶೀಲಾಳು ಅದನ್ನು ವಿರೋಧಿಸಿ, ಈ ವಿಷಯವನ್ನು ಮಾಲೀಕರಿಗೆ ತಿಳಿಸುತ್ತೇನೆ ಎಂದು ಹೇಳಿದ್ದರಿಂದ, 1 ನೇ ಆರೋಪಿಯು ಆಕೆಯನ್ನು ಸೀರೆಯಿಂದ ಕುತ್ತಿಗೆ ಬಿಗಿದು, ಕೊಲೆ ಮಾಡಿರುತ್ತಾನೆ, ಈ ವಿಷಯ ಗೊತ್ತಿದ್ದರೂ ಸಹ 2 ನೇ ಆರೋಪಿಯು ಕೊಲೆಯ ವಿಷಯವನ್ನು ಮುಚ್ಚಿಟ್ಟು, ನಿಮ್ಮ ಬಳಿ ಸುಶೀಲಾಳಿಗೆ ಹೃದಯಾಘಾತವಾಗಿರುತ್ತದೆ ಎಂದು ಸುಳ್ಳು ಹೇಳಿರುತ್ತಾನೆ" ಎಂದು ಪೋಲಿಸರು ಹೇಳಿರುತ್ತಾರೆ. ನನ್ನ ತಾಯಿಯ ಕಾರ್ಯ ಮುಗಿಸಿದ 3 ದಿನಗಳ ನಂತರ ಪುನಃ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ, "1 ನೇ ಆರೋಪಿಯು ಸುಶೀಲಾಳನ್ನು ಕೊಲೆ ಮಾಡಿದ ಸಮಯದಲ್ಲಿ ಆಕೆಯ ಕಾಲುಗಳು ಗೊಡೆಯ ಮೊಳೆಗೆ ತಾಗಿ ಗಾಯವಾಗಿರುತ್ತದೆ" ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಮೂರು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತುಗಳ ಮೇಲೆ ಇದ್ದ ಸೀಲು**

**ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅವುಗಳನ್ನು ತೆರೆಯಲು ಅನುಮತಿಸಲಾಯಿತು.**)

7. ಮೃತೆ ಸುಶೀಲಾ ಕೊಲೆಯಾದ ಸಮಯದಲ್ಲಿ ಧರಿಸಿದ್ದ ಮಿಕ್ಸ್ ಕಲರ್ ಸೀರೆ, ಕೆಸರಿ ಬಣ್ಣದ ಬೌಸ್ ಮತ್ತು ಕಂದು ಬಣ್ಣದ ಲಂಗವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮುದ್ದೆಮಾಲು-1 ರಿಂದ 3 ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಎಲ್.ಎ.ಡಿ.ಸಿ., ರವರಿಂದ.</u>**

8. ನಾನು ಶಾಲೆ ಕಲಿತಿಲ್ಲ. ಮೃತ ಸುಶೀಲಾಳಿಗೆ ನಾವು 2 ಜನ ಮಕ್ಕಳು. ನಮ್ಮ ತಂದೆ ನಾವು ಸಣ್ಣವರಿದ್ದಾಗ ತೀರಿಕೊಂಡಿರುತ್ತಾರೆ. ನನ್ನ ತಾಯಿ ದಾಂಡೇಲಿಯಲ್ಲಿ ಕೂಲಿ ಕೆಲಸಕ್ಕೆ ಹಾಗೂ ಮನೆಗೆಲಸಕ್ಕೆ ಹೋಗುತ್ತಿದ್ದರು. ನನ್ನ ತಾಯಿ ವಾಸ ಮಾಡುತ್ತಿದ್ದ ದಾಂಡೇಲಿಯ ಗಾಂಧಿನಗರದ ಆಶ್ರಯ ಕಾಲೋನಿಯ ಮನೆಯ ಅಕ್ಕ-ಪಕ್ಕದಲ್ಲಿ ಮನೆಗಳಿರುತ್ತವೆ. ಆಶ್ರಯ ಕಾಲೋನಿಯಲ್ಲಿ ಎಷ್ಟು ಜನ ಇದ್ದಾರೆ ಎಂದರೆ ಸಾಕ್ಷಿಯು ಸುಮಾರು 30 ಜನರು ಇರುತ್ತಾರೆ ಎಂದು ನುಡಿಯುತ್ತಾರೆ.

9. ಚಾಸಾ-2 ನನ್ನ ದೂರದ ಸಂಬಂಧಿ. ಚಾಸಾ-6 ನನ್ನ ತಮ್ಮ. ಚಾಸಾ-7 ರವರು ಚಾಸಾ-2 ರವರ ಅಣ್ಣ, ಅವರು ದೂರದ ಸಂಬಂಧಿ ಹಾಗೂ ಸಂಬಂಧದಲ್ಲಿ ನನಗೆ ಅಣ್ಣನಾಗಬೇಕು. ಚಾಸಾ-3 ರವರು ನನ್ನ ತಾಯಿ ವಾಸಿಸುತ್ತಿದ್ದ ಮನೆಯ ಪಕ್ಕದ ಮನೆಯವರು. ಆಶ್ರಯ ಕಾಲೋನಿಯಲ್ಲಿ ನಮ್ಮ ಜಾತಿಯ ಜನರನ್ನು ಬಿಟ್ಟು, ಇತರೆ ಜಾತಿಯ ಜನರು ಇರುತ್ತಾರೆ ಎಂದರೆ ಸರಿ. ಆಶ್ರಯ ಕಾಲೋನಿಯಿಂದ ನೇಚರ್ ನೆಸ್ಟ್ ಹೋಂ ಸ್ಟೇ ರೂ.50/-ಗಳ ಬಸ್ ಚಾರ್ಜಿನ ದಾರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾಯಿ ಕೊಲೆಯಾಗುವ ಮೊದಲು 1 ವರ್ಷದಿಂದ ಅಲ್ಲಿ ಕೆಲಸ ಮಾಡುತ್ತಿರುತ್ತಾರೆ. ನಾನು ನೇಚರ್ ನೆಸ್ಟ್ ಹೋಂ ಸ್ಟೇಗೆ 2 ಬಾರಿ ನನ್ನ ತಾಯಿಯನ್ನು ನೋಡಲು ಹೋಗಿರುತ್ತೇನೆ. ನನ್ನ ತಾಯಿ ಆಶ್ರಯ ಕಾಲೋನಿಗೆ ಎಷ್ಟು ದಿನಕ್ಕೆ ಬಂದು ಹೋಗಿ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಪಾತ್ರೆ ತೊಳೆಯುವ ಕೆಲಸ ಮಾಡುತ್ತಿದ್ದರಿಂದ, ಆಕೆಯು ನೀರಿನೊಂದಿಗೆ ಕೆಲಸ ಮಾಡುತ್ತಿದ್ದಳು ಎಂದರೆ ಸರಿ. ನಾನು ನೇಚರ್ ನೆಸ್ಟ್ ಹೋಂ ಸ್ಟೇಗೆ ಹೋದಾಗ 1 ನೇ ಆರೋಪಿಯೊಂದಿಗೆ 1 ಸಲ ಮಾತನಾಡಿರುತ್ತೇನೆ. ನನ್ನ ತಾಯಿ 1 ನೇ ಆರೋಪಿತನೊಂದಿಗೆ

ಒಳ್ಳೆಯ ಭಾಂದವ್ಯದಲ್ಲಿದ್ದಳು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಮೊಬೈಲ್ ನಾಟ್ ರೀಚೆಬಲ್ ಆದಾಗ, 1 ನೇ ಆರೋಪಿಯ ಮೊಬೈಲ್ ಗೆ ಕರೆ ಮಾಡಿ ಮಾತನಾಡುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ನೇ ಆರೋಪಿತನ ಮೊಬೈಲ್ ನಂಬರ ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನನ್ನ ತಾಯಿಯ ಮೊಬೈಲ್ ನಲ್ಲಿ ಕರೆನ್ಸಿ ಖಾಲಿಯಾದಾಗ ಆಕೆಯೂ ಸಹ 1 ನೇ ಆರೋಪಿತನ ಮೊಬೈಲ್ ನಿಂದ ಕರೆ ಮಾಡುತ್ತಿದ್ದಳು ಎಂದರೆ ಸರಿಯಲ್ಲ.

10. ನನಗೆ ಹಣಕಾಸಿನ ತೊಂದರೆ ಇದ್ದಾಗ, ನನ್ನ ತಾಯಿಯ ಬಳಿ ಹಣ ಪಡೆದುಕೊಳ್ಳುತ್ತಿದ್ದೆ ಎಂದರೆ ಸಾಕ್ಷಿಯು ಆಗಾಗ ಪಡೆದುಕೊಳ್ಳುತ್ತಿದ್ದೆ ಹಾಗೂ ಆ ರೀತಿ ಪಡೆದ ಹಣವನ್ನು ಹಿಂತಿರುಗಿಸುತ್ತಿದ್ದೆ ಎಂದು ನುಡಿಯುತ್ತಾರೆ. 1 ನೇ ಆರೋಪಿತಯ ಬಗ್ಗೆ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ನನ್ನ ಅಮ್ಮ 1 ನೇ ಆರೋಪಿ ಎಸ್ಸಿ ಜಾತಿಗೆ ಸೇರಿದವನು ಎಂದು ಹೇಳಿರುತ್ತಾಳೆ ಎಂದು ನುಡಿಯುತ್ತಾರೆ. ನನ್ನ ತಾಯಿ ಯಾವ ಜಾತಿಗೆ ಸೇರಿದವಳು ಎಂದು 1 ನೇ ಆರೋಪಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಪರಿಶಿಷ್ಟ ಜಾತಿಗೆ ಸೇರಿದವಳು ಎನ್ನುವ ಬಗ್ಗೆ ಏನಾದರೂ ದಾಖಲೆಯನ್ನು ಪೋಲಿಸರಿಗೆ ಕೊಟ್ಟಿದ್ದಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ಪರಿಶಿಷ್ಟ ಜಾತಿಗೆ ಸೇರಿದವಳು ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ನಾನು ಪೋಲಿಸರಿಗೆ ನೀಡಿರುವುದಿಲ್ಲ. ನಿಪಿ-1 ದೂರನ್ನು ಬರೆಯುವ ಸಮಯದಲ್ಲಿ ಎಷ್ಟು ಜನರು ಇದ್ದರು ಎನ್ನುವ ಬಗ್ಗೆ ನಾನು ಗಮನಿಸಿಲ್ಲ. ನಾನು ದೂರು ನೀಡಿದ ದಿನ ಆಸ್ಪತ್ರೆಯಲ್ಲಿ 2 ಜನ ಪೋಲಿಸರು ಬಂದಿರುತ್ತಾರೆ. ನನ್ನ ತಾಯಿ ಮೃತಳಾದ ವಿಷಯ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ. ನಾನು ಶವ ಪಂಚನಾಮೆಯ ಕಾಲಕ್ಕೆ ಶವವನ್ನು ನೋಡಿದಾಗ ಕಿವಿಯ ಕೆಳಗೆ ಕುತ್ತಿಗೆಯಲ್ಲಿ ಗಂಟಲಿನ ವರೆಗೆ ಕಪ್ಪಾಗಿತ್ತು. ಕುತ್ತಿಗೆ ಹಾಗೂ ಕಾಲಿನ ಹಿಮ್ಮಡಿಗಳನ್ನು ಬಿಟ್ಟು ಬೇರೆ ಯಾವುದೇ ಭಾಗದಲ್ಲಿ ಗಾಯವಾಗಿರಲಿಲ್ಲ ಎಂದರೆ ಸರಿ.

11. ನನ್ನ ತಾಯಿಗೆ ಅರಾಮ ಇಲ್ಲಾ ಎಂದರೆ ಔಷಧಿಗಳನ್ನು ತಂದು ಕೊಡುತ್ತಿದ್ದೇವು ಎಂದರೆ ಸರಿಯಲ್ಲ. ಆಕೆಯು ನೀರಿನಲ್ಲಿ ಕೆಲಸ ಮಾಡುತ್ತಿದ್ದರಿಂದ ಆಕೆಯ ಹಿಮ್ಮಡಿಗಳು ಒಡೆದು ಹೋಗಿರುತ್ತವೆ ಎಂದರೆ ಸರಿಯಲ್ಲ. ನನ್ನ ತಾಯಿಯ ಕುತ್ತಿಗೆಯ ಬಳಿ ಯಾವುದೇ ಬಿಗಿದ ಗುರುತು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಪರಿಶಿಷ್ಟ ಜಾತಿಯವಳು ಎಂದು 1 ನೇ ಆರೋಪಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಪರಿಶಿಷ್ಟ ಜಾತಿಗೆ ಸೇರಿಲ್ಲ ಎಂದರೆ

ಸರಿಯಲ್ಲ. ಪೋಲಿಸರ ಮಾತು ಕೇಳಿ 1 ನೇ ಆರೋಪಿತನ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–7 ವೃತ್ತಿಯಲ್ಲಿ ಚಾಲಕನೆಂದರೆ ಸರಿ. ಅದೇ ರೀತಿ ಸಮಾಜ ಸೇವೆ ಮಾಡುತ್ತಾನೆ ಎಂದರೆ ಸರಿ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಡಗಳ (ದೌರ್ಜನ್ಯ ತಡೆ) ಕಾಯಿದೆ ಅಡಿ ಪ್ರಕರಣ ದಾಖಲಾದರೆ ಸರ್ಕಾರದಿಂದ ಹಣ ಬರುತ್ತದೆ ಎಂಬ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಾದ ನಂತರ ನನಗೆ ಸರಕಾರದಿಂದ ನನಗೆ ಹಣ ಬಂದಿರುತ್ತದೆ ಎಂದರೆ ಸರಿಯಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಡಗಳ (ದೌರ್ಜನ್ಯ ತಡೆ) ಕಾಯಿದೆ ಅಡಿ ಪ್ರಕರಣ ದಾಖಲಾದರೆ ಸರ್ಕಾರದಿಂದ ಹಣ ಬರುತ್ತದೆ ಎಂದು ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ವಿ.ಎ.ಟಿ. ವಕೀಲರಿಂದ**

12. ನಾನು ಪೋಲಿಸರ ಮುಂದೆ ಒಮ್ಮೆ ದೂರು ಹಾಗೂ ಒಮ್ಮೆ ಹೇಳಿಕೆಯನ್ನು ನೀಡಿರುತ್ತೇನೆ. ನಿಪಿ–1 ದೂರಿನಲ್ಲಿರುವ ಮಾಹಿತಿಯ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನು ಹೇಳಿದಂತೆ ಚಾಸಾ–8 ರವರು ದೂರನ್ನು ಬರೆದಿರುತ್ತಾರೆ ಎಂದು ನುಡಿಯತ್ತಾರೆ. ಮುದ್ದೆಮಾಲು–1 ರಿಂದ 3 ನ್ನು ನನ್ನ ಸಮಕ್ಷಮ ಜಪ್ತು ಮಾಡಿದ ಬಗ್ಗೆ ನನ್ನಿಂದ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ನಾನು 1 ನೇ ಆರೋಪಿಯ ಮೇಲೆ ಮಾತ್ರ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ಕೊಲೆ ಮಾಡಿರುತ್ತಾನೆ ಎಂಬ ಬಗ್ಗೆ ನಾನು ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. 2 ನೇ ಆರೋಪಿಯು ನನ್ನ ತಾಯಿಗೆ ಹೃದಯಾಘಾತವಾಗಿದೆ ಎಂದು ಹೇಳಿದ ಎಂಬುದು ನನ್ನ ಊಹೆಯಾಗಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ನನಗೆ ಕರೆ ಮಾಡಿ ವಿಷಯ ತಿಳಿಸಿದ ಎಂದು ಹೇಳಿದ ಮೊಬೈಲ್ ನಂಬರನ್ನು ನನ್ನ ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ–1 ದೂರನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಮೊಬೈಲ್ ನಂಬರನ್ನು ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ 2 ನೇ ಆರೋಪಿಯು ಕರೆ ಮಾಡಿ, ನಿನ್ನ ತಾಯಿ ತೀರಿಕೊಂಡಿರುತ್ತಾಳೆ ಎಂದು ಮಾತ್ರ ಹೇಳಿದ್ದು, ಎಲ್ಲಿಯೂ ಹೃದಯಾಘಾತವಾಗಿದೆ ಎಂದು ಹೇಳಿದ್ದ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯ ವಿರುದ್ದ ಸುಳ್ಳು ದೂರನ್ನು ಸೃಷ್ಟಿಸಿ, ಸುಳ್ಳು ಸಾಕ್ಷ್ಯವನ್ನು

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ 2 ನೇ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ